**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ**
**ಘನ ನ್ಯಾಯಾಲಯದಲ್ಲಿ**

**ಪ್ರಕರಣ ಸಂಖ್ಯೆಃ ಎಸ್.ಸಿ 26/2020**

ದಿನಾಂಕಃ 07.09.2021
(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.)

ಪ್ರಾ.ಸಾಃ 7 (ಚಾ.ಸಾ.9 )

| | | |
|---|---|---|
| ಹೆಸರು | ಃ | ಅರೇಂದ್ರೇಗೌಡ |
| ತಂದೆಯ ಹೆಸರು | ಃ | ಲೇ.ಕೆ.ತಿಮ್ಮೇಗೌಡ |
| ವಯಸ್ಸು | ಃ | 60 ವರ್ಷ |
| ಉದ್ಯೋಗ | ಃ | ನಿವೃತ್ತ ಎಎಸ್ಐ |
| ವಾಸ ಸ್ಥಳ | ಃ | ಚನ್ನಪಟ್ಟಣ |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ನಾನು 2019 ರಿಂದ ಜೂನ್ 2020 ರವರೆಗೆ ಚನ್ನಪಟ್ಟಣ ಪುರ ಠಾಣೆಯಲ್ಲಿ ಎಎಸ್ಐ ಆಗಿ ಕಾರ್ಯ ನಿರ್ವಹಿಸುತ್ತಿದ್ದೆನು.

2. ತಾಃ 21.01.2020 ರಂದು ಈ ಪ್ರಕರಣದ ಆರೋಪಿ - ಸೈಯದ್ ಜಬೀರ್‌ನನ್ನು ದಸ್ತಗಿರಿ ಮಾಡಲು ಪಿಎಸ್ಐರವರು ನನ್ನನ್ನು ಹಾಗು ಪೇದೆ 319 ಹಾಗು ಪೇದೆ 775 ರವರನ್ನು ನೇಮಿಸಿದ್ದರು. ಅದರಂತೆ ನಾವು ಚನ್ನಪಟ್ಟಣದ ಮೆಹದಿ ನಗರಕ್ಕೆ ಹೋಗಿ ಆರೋಪಿಯ ಬಗ್ಗೆ ವಿಚಾರಿಸಿದಾಗ ಆರೋಪಿ ಕೆಂಗೇರಿಯ ಬಳಿ ವಾಸವಿರುವ ಬಗ್ಗೆ ಗೊತ್ತಾಯಿತು. ನಾವು ಕೆಂಗೇರಿಯ ಬಾಬಾಸಾಹೇಬ್ರು ಪಾಳ್ಯಕ್ಕೆ ಹೋಗಿ ವಿಚಾರಿಸಿದಾಗ ಆರೋಪಿ ವಾಸವಿದ್ದ ಸ್ಥಳ ತಿಳಿದು ಬಂದ ಮೇರೆಗೆ ಅಲ್ಲಿಗೆ ಬೆಳಿಗ್ಗೆ 11 ಗಂಟೆಗೆ ಹೋಗಿ ಅಲ್ಲಿದ್ದ ಆರೋಪಿಯನ್ನು ವಶಕ್ಕೆ ಪಡೆದು, ಮಧ್ಯಾಹ್ನ 12.30 ಕ್ಕೆ ಠಾಣೆಗೆ ಕರೆ ತಂದು ಪಿಎಸ್ಐರವರ ಮುಂದೆ ಹಾಜರುಪಡಿಸಿ ವರದಿ ನೀಡಿರುತ್ತೇನೆ. ಸದರಿ ವರದಿಯನ್ನು ಹಾಗು ಅದರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ

ನೋಡಿ ಗುರುತಿಸಿದ್ದು ವರದಿಯನ್ನು ಈಗ ನಿಪಿ.3 ಎಂತಲೂ ಸಾಕ್ಷಿಯ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು.

**3.** ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಕೆವಿಕೆ., ವಕೀಲರಿಂದಃ**

**4.** ಪಿಎಸ್‌ಐರವರು ಆರೋಪಿಯ ಚಹರೆ ಹಾಗು ಅಥವಾ ಫೋಟೋಗಳನ್ನು ನಮಗೆ ನೀಡಿರಲಿಲ್ಲ ಅಂದರೆ ಸರಿ. ಕೆಂಗೇರಿಯ ಬಾಬಾಸಾಹೇಬರ ಪಾಳ್ಯದಲ್ಲಿ ಆರೋಪಿ ತನ್ನ ತಾಯಿಯೊಂದಿಗೆ ವಾಸವಿದ್ದ ಮನೆಗೆ ನಾವು ಆ ದಿನ ಹೋಗಿದ್ದೆವು. ಆರೋಪಿಯನ್ನು ವಶಕ್ಕೆ ಪಡೆದ ಬಗ್ಗೆ ಸ್ಥಳದಲ್ಲಿ ಯಾವುದೇ ದಾಖಲೆ ಮಾಡಿ ಆರೋಪಿಯ ತಾಯಿಗೆ ಆ ಬಗ್ಗೆ ಲಿಖಿತ ದಾಖಲೆ ನೀಡಿರುವುದಿಲ್ಲ. ಮೌಖಿಕವಾಗಿ ಆರೋಪಿಯ ತಾಯಿಗೆ ವಿಷಯ ತಿಳಿಸಿರುತ್ತೇವೆಂದು ಸಾಕ್ಷಿ ಸ್ವತಃ ನುಡಿದಿದ್ದಾರೆ.

**5.** ನಾವು ಕೆಂಗೇರಿಯ ಬಾಬಾಸಾಹೇಬರು ಪಾಳ್ಯದ ಆರೋಪಿ ತಾಯಿಯ ಮನೆಗೆ ಹೋಗಿ ಅಲ್ಲಿದ್ದ ಆರೋಪಿಯನ್ನು ನಮ್ಮ ವಶಕ್ಕೆ ಪಡೆದವು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿಯನ್ನು ಗುರುತಿಸಲು ಆ ದಿನ ನಾವು ಪಿರ್ಯಾದಿಯ ಕಡೆಯವರನ್ನು ನಾವು ಕರೆದುಕೊಂಡು ಹೋಗಿರಲಿಲ್ಲ. ಆರೋಪಿಯ ತಾಯಿಯೇ ಆರೋಪಿಯ ಗುರುತನ್ನು ನಮಗೆ ಹೇಳಿರುತ್ತಾರೆ ಎಂದು ಸಾಕ್ಷಿ ಸ್ವಯಂ ನುಡಿದಿರುತ್ತಾರೆ. ಆರೋಪಿಯನ್ನು ವಶಕ್ಕೆ ಪಡೆದುಕೊಂಡು ಬಂದು ನಾನು ಪಿಎಸ್‌ಐರವರ ಮುಂದೆ ಹಾಜರುಪಡಿಸಿಲ್ಲವಾದರೂ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**6.** ನಾನು ಯಾವುದೇ ವರದಿ ನೀಡಿಲ್ಲವಾದರೂ ಸಹ ನಿಪಿ.3 ನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿಕೊಟ್ಟಿರುತ್ತೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**
**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ರಮಾ ಬಿ.ಜಿ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**